**ಪ್ರಕರಣಗಳಿಗೆ ಕಡಿವಾಣ ಹಾಕಲು ವ್ಯವಸ್ಥೆ ವಿಫಲವಾಗಿರುವುದು ಏಕೆ?**

ಪೊಲೀಸರು ಮಕ್ಕಳ ಪ್ರಕರಣಗಳನ್ನು ಇತರ ಪ್ರಕರಣಗಳ ರೀತಿಯಲ್ಲೇ ನಿಭಾಯಿಸುತ್ತಾರೆ. ಈ ವಿಷಯದಲ್ಲಿ ತಜ್ಞ ಪೊಲೀಸ್ ಅಧಿಕಾರಿಗಳ ಕೊರತೆಯೂ ಇದೆ. ನಾಪತ್ತೆಯಾದ ಕೆಲವೇ ಗಂಟೆಗಳಲ್ಲಿ (ಗೋಲ್ಡನ್ ಅವರ್) ಮಕ್ಕಳನ್ನು ಹುಡುಕುವ ಕೆಲಸ ಮಾಡಬೇಕು. ಆ ಬಳಿಕ ಅವರನ್ನು ಪತ್ತೆ ಹಚ್ಚುವುದು ಕಷ್ಟ. ಸ್ವಯಂಸೇವಾ ಸಂಘಟನೆಗಳು ಮಾಹಿತಿ ನೀಡಿದಾಗ ಜತನದಿಂದ ಹುಡುಕುವ ಕೆಲಸ ಮಾಡಬೇಕು. ನೆಪ ಹೇಳಿ ಜಾರಿಕೊಳ್ಳುವುದು ಸರಿಯಲ್ಲ. ಹೋರಾಟಗಾರರು ಒತ್ತಡ ಹೇರಿದಾಗ ಸಿಬ್ಬಂದಿ ಸಮಸ್ಯೆ, ವಾಹನಗಳ ಕೊರತೆಯಂತಹ ಸಮಸ್ಯೆಗಳನ್ನು ಪೊಲೀಸರು ಪಟ್ಟಿ ಮಾಡುತ್ತಾರೆ. ಡಿಸಿಪಿ ಮಟ್ಟದ ಅಧಿಕಾರಿಯ ಮೇಲ್ವಿಚಾರಣೆಯಲ್ಲಿ ಕಾರ್ಯಾಚರಣೆ ನಡೆಸಬೇಕು. ಜತೆಗೆ ಸರಕಾರವೂ ಪೊಲೀಸರಿಗೆ ಅಗತ್ಯ ಸವಲತ್ತುಗಳನ್ನು ಒದಗಿಸಬೇಕು.

ಹಿಂದೆ ಮಕ್ಕಳ ಕಾಣೆಯ ಬಗ್ಗೆ ದೂರು ನೀಡಲು ಹೋದಾಗ, 'ಒಂದೆರಡು ದಿನ ಕಾದು ನೋಡಿ, ತಾವೇ ವಾಪಸ್ ಬರಬಹುದು' ಎಂದು ಪೋಷಕರನ್ನು ದೂರು ದಾಖಲಿಸದೆ ಹಿಂದಕ್ಕೆ ಕಳುಹಿಸುತ್ತಿದ್ದರು. ಪೋಷಕರೂ ಅಷ್ಟೇ; ಮಕ್ಕಳು ಪತ್ತೆಯಾದರೆ ಸಾಕು ಎಂದು ಸುಮ್ಮನಾಗುತ್ತಿದ್ದರು. ಮಕ್ಕಳ ಕಾಣೆಯ ಬಗ್ಗೆ ಪೊಲೀಸರು ಕಡ್ಡಾಯವಾಗಿ ಎಫ್ಐಆರ್ ದಾಖಲಿಸಬೇಕು ಎಂದು ಸುಪ್ರೀಂ ಕೋರ್ಟ್ ಆದೇಶವಿದೆ. ಇದರಿಂದಾಗಿ ಈಗ ಪರಿಸ್ಥಿತಿ ಸ್ವಲ್ಪ ಸುಧಾರಣೆಯಾಗಿದೆ.

ಈ ವಿಷಯದಲ್ಲಿ ಕೆಲವು ಸ್ವಯಂಸೇವಾ ಸಂಘಟನೆಗಳ (ಎನ್‌ಜಿಒ) ಲೋಪವೂ ಇದೆ. ಅವರು ಕಷ್ಟಪಟ್ಟು ಮಕ್ಕಳನ್ನು ರಕ್ಷಿಸುತ್ತಾರೆ. ಆದರೆ, ತಮ್ಮ ಮಕ್ಕಳ ರಕ್ಷಣಾ ಕೇಂದ್ರದಲ್ಲಿ ಸಂಖ್ಯೆ ಹೆಚ್ಚಬೇಕು ಹಾಗೂ ಅಧಿಕ ಅನುದಾನ ಪಡೆಯಬೇಕು ಎಂಬ ಕಾರಣಕ್ಕೆ ಪೋಷಕರ ಮಡಿಲಿಗೇ ಒಪ್ಪಿಸುವುದೇ ಇಲ್ಲ. ತಮಿಳುನಾಡಿನಲ್ಲಿ ಇದನ್ನು ನಾನು ಪ್ರತ್ಯಕ್ಷವಾಗಿ ಕಂಡಿದ್ದೇನೆ. ಆದರೆ, ನಮ್ಮ ರಾಜ್ಯದ ಕೆಲವು ಎನ್‌ಜಿಒಗಳು ಹಾಗೂ ಹೋರಾಟಗಾರರು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**▸ ಹುಡುಕಾಟದ ವಿಷಯದಲ್ಲಿ ಇಲಾಖೆಗಳ ನಡುವೆ ಸಮನ್ವಯದ ಕೊರತೆ ಇದೆಯಲ್ಲ?**

ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಕಾರ್ಮಿಕ ಇಲಾಖೆ, ಮಾನವ ಹಕ್ಕುಗಳ ಆಯೋಗ, ಮಹಿಳಾ ಆಯೋಗ, ಬಾಲ ನ್ಯಾಯ ಮಂಡಳಿ, ಆಯೋಗಗಳು, ಸಮಿತಿಗಳು– ಇಂತಹ ಹತ್ತು ಹಲವು ವ್ಯವಸ್ಥೆಗಳು ಪ್ರಕರಣಗಳನ್ನು ನೇರವಾಗಿ ನಿರ್ವಹಿಸುತ್ತಿವೆ. ಆದರೂ, ಮಕ್ಕಳ ನಾಪತ್ತೆ ಪ್ರಕರಣಗಳು ನಿಯಂತ್ರಣಕ್ಕೆ ಬರುತ್ತಿಲ್ಲ. ಕೆಲವು ಜಿಲ್ಲೆಗಳಲ್ಲಿ ಕಾರ್ಮಿಕ ಇಲಾಖೆಯಲ್ಲಿ ಇಬ್ಬರು ಅಧಿಕಾರಿಗಳಷ್ಟೇ ಇದ್ದಾರೆ. ಇಲಾಖೆಗಳಲ್ಲಿ ಸಿಬ್ಬಂದಿ ಕೊರತೆ ದೊಡ್ಡ ಸಮಸ್ಯೆ. ಸರಕಾರ ಖಾಲಿ ಹುದ್ದೆಗಳನ್ನು ತುಂಬಬೇಕು. ದೊಡ್ಡ ಜಿಲ್ಲೆಗಳಿಗೆ ಹೆಚ್ಚುವರಿ ಸಿಬ್ಬಂದಿ ಒದಗಿಸಬೇಕು. ಜತೆಗೆ ಇಲಾಖೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು. ಈ ಕೆಲಸ ತುರ್ತಾಗಿ ಆಗಬೇಕು. ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ಜನರ ನೆರವು ಪಡೆಯಬೇಕು.

**▸ ನಾಪತ್ತೆಯಾದ ಮಕ್ಕಳನ್ನು ಪತ್ತೆಹಚ್ಚಲು 'ಆಧಾರ್' ಬಳಕೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು ಅಲ್ಲವೇ? ಈ ನಿಟ್ಟಿನಲ್ಲಿ ಪ್ರಯತ್ನಗಳು ಏಕೆ ನಡೆಯುತ್ತಿಲ್ಲ?**

ಹಲವು ಪೋಷಕರು ಸಣ್ಣ ವಯಸ್ಸಿನಲ್ಲಿ ಅವರನ್ನು ಭಿಕ್ಷಾಟನೆಗೆ ತಳ್ಳಿರುತ್ತಾರೆ. ನಮ್ಮ ಬೆವರಿನ ಹಣವನ್ನು ಅವರಿಗೆ ಏಕೆ ನೀಡಬೇಕು ಎಂಬ ಭಾವ ಮಕ್ಕಳಲ್ಲಿ ಮೂಡಿರುತ್ತದೆ. ಹೀಗಾಗಿ ಪತ್ತೆಯಾದ ಬಳಿಕ ಕೆಲವು ಮಕ್ಕಳಿಗೆ ಮನೆಗೆ ಹೋಗಲು ಮನಸ್ಸು ಇರುವುದಿಲ್ಲ. ಹೀಗಾಗಿ ಅವರು ಸುಳ್ಳು ಹೇಳುತ್ತಾರೆ ಹಾಗೂ ದಿಕ್ಕು ತಪ್ಪಿಸುತ್ತಾರೆ. ಆಧಾರ್ ಬಳಸಿದರೆ ಸುಲಭದಲ್ಲಿ ಅವರ ಮೂಲದ ಮಾಹಿತಿ ಸಿಗುತ್ತದೆ. ಈಗ ಎಲ್ಲ ಕಡೆ ಆಧಾರ್ ಕಡ್ಡಾಯ ಮಾಡಲಾಗುತ್ತಿದೆ. ಅದೇ ರೀತಿ ಇಲ್ಲೂ ಆಧಾರ್ ಬಳಸಿ ಜಾಣ್ಮೆ ತೋರಬೇಕು.

**▸ ಮಕ್ಕಳ ಕಳ್ಳಸಾಗಣೆ ವಿಚಾರದಲ್ಲಿ ಪೋಷಕರಲ್ಲಿ ಹಾಗೂ ಸಾರ್ವಜನಿಕರಲ್ಲಿ ಸಂವೇದನೆ ಮೂಡಿಸಲು ಏನು ಮಾಡಬಹುದು?**

ಈಗಲೂ ಜಾಗೃತಿ ಕಾರ್ಯಕ್ರಮಗಳು ನಡೆಯುತ್ತಿವೆ. ಅವು ಕೆಲವೇ ದಿನಗಳಿಗೆ ಸೀಮಿತವಾಗಿರುತ್ತವೆ. ಇದು ಸರಿಯಲ್ಲ. ಇದು ನಿರಂತರವಾಗಿ ಮುಂದುವರಿಯಬೇಕು. ಜಾಥಾ, ಮಾನವ ಸರಪಳಿ, ಉಪನ್ಯಾಸ, ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳಬೇಕು. ಮಾಧ್ಯಮಗಳು, ಸಾಮಾಜಿಕ ಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ಸಾರ್ವಜನಿಕರನ್ನು , ವ್ಯಾಪಾರಸ್ಥರನ್ನು ಒಳಗೊಳ್ಳುವಂತೆ ಕಾರ್ಯಕ್ರಮಗಳನ್ನು ರೂಪಿಸಬೇಕು.

**ಸಂದರ್ಶನ: ಮಂಜುನಾಥ ಹೆಬ್ಬಾರ್**

ಮಾಡಲಾಗುತ್ತದೆ. ಹಾಗೆ ಖರೀದಿಸಿದ ಹೆಂಗಸರನ್ನು ಪಶುಗಳಿಗಿಂತ ಕೀಳಾಗಿ ನೋಡಲಾಗುತ್ತದೆ.

★ ಇಂತಹ ಅಪಹರಣಕಾರರು ಬಸ್ ಹಾಗೂ ರೈಲು ನಿಲ್ದಾಣ, ಮಾರುಕಟ್ಟೆಗಳಂತಹ ಜನನಿಬಿಡವಾದ ಪ್ರದೇಶಗಳಲ್ಲಿ ಸದಾ ತಿರುಗುತ್ತಿದ್ದು ಏಕಾಂಗಿಯಾಗಿ ತಿರುಗುತ್ತಿರುವ ಮಕ್ಕಳ ಮೇಲೆ ನಿಗಾ ಇಟ್ಟಿರುತ್ತಾರೆ. ಅವರನ್ನು ತಂದೆ –ತಾಯಿಯರ ಕಡೆಗೆ ಕರೆದುಕೊಂಡು ಹೋಗುವುದಾಗಿ ನಂಬಿಸಿ ಅಪಹರಣ ಮಾಡುತ್ತಾರೆ.

★ ಇನ್ನು ಹಣಕ್ಕೋಸ್ಕರ ಮಕ್ಕಳನ್ನು ಅಪಹರಿಸುವುದು ಇತ್ತೀಚೆಗೆ ಆಗಾಗ್ಗೆ ನಡೆಯುವ ಕೃತ್ಯ. ಶ್ರೀಮಂತರ ಮಕ್ಕಳನ್ನು ಅಪಹರಿಸಿ ದೊಡ್ಡ ಮೊತ್ತದ ಹಣಕ್ಕೆ ಬೇಡಿಕೆ ಇಡುವುದನ್ನು ಆಗಾಗ ಟಿವಿ ಹಾಗೂ ಪತ್ರಿಕೆಗಳಲ್ಲಿ ಕಾಣುತ್ತಲೇ ಇರುತ್ತೇವೆ.

ಮಕ್ಕಳ ಕಣ್ಮರೆಯನ್ನು ತಪ್ಪಿಸುವ ನಿಟ್ಟಿನಲ್ಲಿ ಎಲ್ಲ ಜವಾಬ್ದಾರಿಯನ್ನೂ ಪೊಲೀಸರಿಗೆ ಬಿಟ್ಟುಕೊಟ್ಟು ಸುಖವಾಗಿ ಇರುವುದು ಸಾಧ್ಯವಿಲ್ಲ. ಬದಲಾಗುತ್ತಿರುವ ಜೀವನಶೈಲಿಗೆ ತಕ್ಕಂತೆ ಹೊಂದಿಕೊಳ್ಳುವ ಮತ್ತು ಸಮಸ್ಯೆಗಳನ್ನು ಎದುರಿಸುವ ಛಾತಿಯನ್ನು ಮಕ್ಕಳಲ್ಲಿ ಬೆಳೆಸಬೇಕು. ಈ ವಿಷಯದಲ್ಲಿ ಪೋಷಕರ ಪಾತ್ರ ಮಹತ್ವದ್ದು. ಮಕ್ಕಳ ಮೇಲೆ ಹದ್ದಿನ ಕಣ್ಣಿಟ್ಟು ಕಾಪಾಡಬೇಕೆಂದಬುದು ಇದರ ಅರ್ಥವಲ್ಲ. ಜಾಗ್ರತೆ ಎಷ್ಟು ವಹಿಸಬೇಕೋ ಅಷ್ಟೇ ಸ್ವಾತಂತ್ರ್ಯವನ್ನೂ ಮಕ್ಕಳಿಗೆ ನೀಡಬೇಕು. ಆದರೆ ಸ್ವಾತಂತ್ರ್ಯ ಸ್ವೇಚ್ಛೆಯಾಗದಂತೆ ಮಿತಿಯ ಒಳಗೆಯೇ ಜಾಗ್ರತರಾಗಿರಬೇಕು.

ಮಕ್ಕಳ ರಕ್ಷಣೆಯಲ್ಲಿ ವಿವಿಧ ಸಂಘ ಸಂಸ್ಥೆಗಳ ಹಾಗೂ ನಾಗರಿಕರ ಪಾತ್ರವೂ ಇದೆ. ಈ ಕೆಳಗಿನ ಅಂಶಗಳನ್ನು ಸಾರ್ವಜನಿಕರು ಅನುಸರಿಸುವುದು ಸಮಸ್ಯೆಯ ಗಂಭೀರತೆಯನ್ನು ಕಡಿಮೆಗೊಳಿಸುವಲ್ಲಿ ನೆರವಾಗುತ್ತದೆ.

★ ಪ್ರತಿಯೊಂದು ಸಾರ್ವಜನಿಕ ಸ್ಥಳಗಳಲ್ಲಿ ಜನರಿಗೆ ಕಾಣುವಂತಹ ಜಾಗಗಳಲ್ಲಿ ಮಕ್ಕಳ ಸಹಾಯವಾಣಿಯ ಸಂಖ್ಯೆಯಾದ 1098ನ್ನು ಎಲ್ಲರಿಗೂ ಕಾಣುವಂತೆ ತೋರಿಸುವುದು.

★ ಚಿಕ್ಕ ಮಕ್ಕಳು ಭಿಕ್ಷೆಯಲ್ಲಿ ತೊಡಗಿದ್ದಾಗ ಕೇವಲ ಹಣ ಮಾತ್ರ ಕೊಡದೆ ಅಂತಹ ಮಕ್ಕಳ ಫೋಟೋ ತೆಗೆದು ಯಾವುದಾದರೂ ಸರ್ಕಾರಿ ಸಂಸ್ಥೆಯ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡುವುದು, ಪೋಲಿಸ್ ವೆಬ್‌ಸೈಟ್‌ಗೂ ಕಳುಹಿಸಿಕೊಡುವುದು.

★ ಏಕಾಂಗಿ ಮಕ್ಕಳು ಕಂಡಾಗ ಕೊಂಚ ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದು.

★ ಅನುಮಾನಾಸ್ಪದವಾಗಿ ಕಂಡ ವ್ಯಕ್ತಿಗಳ ಕುರಿತು ಜಾಗರೂಕರಾಗಿದ್ದು ಅಂತಹವರ ಜೊತೆ ಮಕ್ಕಳೇನಾದರೂ ಇದ್ದರೆ ಕೂಡಲೇ ಪೋಲಿಸರಿಗೆ ಮಾಹಿತಿ ಕೊಡುವುದು.

ಮಕ್ಕಳಿಗೆ ಸಂಪೂರ್ಣ ರಕ್ಷಣೆ ಕೊಡದ ಸಮಾಜ ನಾಗರಿಕ ಸಮಾಜವಾಗಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲೂ ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕಿದೆ. 'ನನ್ನ ಕೆಲಸಗಳೇ ಸಾಕಷ್ಟಿವೆ, ಇದೊಂದು ಹೊಸ ರಗಳೆ ಏಕೆ ಬೇಕು' ಎಂದು ಇಂತಹ ಸಂದರ್ಭಗಳಲ್ಲಿ ಕೈಚೆಲ್ಲದೆ ಸಾಮಾಜಿಕ ಜವಾಬ್ದಾರಿಯಿಂದ ವರ್ತಿಸಬೇಕಾಗುತ್ತದೆ.